ಕೆಡವಲು ಹೊರಟಿದ್ದು ನಿಜ ಅಂತ ನಿಮ್ಮ ಬಾಯಲ್ಲೆ ಬಂತು. ಕಾನೂನು ಪ್ರಶ್ನೆಯನ್ನು ನ್ಯಾಯಾಲಯ ಮಾಡಲಿ, ಇದನ್ನುಳಿಸಿಕೊಳ್ಳಲು ಹೋರಾಟ ನಾವು ಮಾಡತೀವಿ. ನಿಮ್ಮ ಮನೆ ಸುತ್ತ ಧರಣೆ ಕೂಡತೀವಿ. ಈ ಭವನವನ್ನ ಕೆಡವೋ ಪ್ರಯತ್ನ ಮಾಡಿ ನೋಡಿ! ಈಗ ಎಚ್ಚರಿಕೆ ಕೊಡೋದಕ್ಕೆ ಮಾತ್ರ ನಾವು ಬಂದಿದ್ದು.' ಅಂದವ ಎದ್ದ. ಉಳಿದವರು ಹಿಂಬಾಲಿಸಿದರು. ತಮ್ಮ ಸುತ್ತಮುತ್ತ ಇದ್ದಕ್ಕಿದ್ದಂತೆ ಏನು ನಡೆಯುತ್ತಿದೆ ಅಂತ ಅರ್ಥವಾಗದೆ ಮನೆಯವರು ದಿಗ್ಮೂಢರಾಗಿ ಕುಳಿತರು.

ದೇಶ್ವಂತರು ಗಟ್ಟಿಮುಟ್ಟಾದ ಆರೋಗ್ಯವಂತರು. ಅಪರೂಪಕ್ಕೆ ಎಲ್ಲರಿಗೂ ಬರುವ ಜ್ವರ, ನೆಗಡಿ ಬಿಟ್ಟರೆ ದೀರ್ಘ ಕಾಯಿಲೆಯಿಂದ ಮಲಗಿದ ದಾಖಲೆಯಿಲ್ಲ. ಈ ಎಲ್ಲಾ ಬೆಳವಣಿಗೆಯಿಂದ ಸಂಜೆಯಾಗುತ್ತಿದ್ದಂತೆ ಆಗಾಗ ತಲೆನೋವು ಕಾಡತೊಡಗಿತು. ಒಂದು ದಿನ ಇದ್ದಕ್ಕಿದ್ದಂತೆ ಎದೆಯಲ್ಲಿ ನೋವು ಕಾಣಿಸಿಕೊಂಡಿತು. ಬೇಡವೆಂದರು ಕೇಳದೆ ಆನಂದ ಅವರನ್ನು ಆಸ್ಪತ್ರೆಗೆ ಕರೆದೊಯ್ದ. ಎಲ್ಲಾ ತರದ ಪರೀಕ್ಷೆಗಳಾದ ಮೇಲೆ ಡಾಕ್ಟರು, ಇದು ಸ್ಟ್ರೆಸ್, ಅಂದರೆ ಒತ್ತಡದಿಂದ ಉದ್ಭವಿಸಿದ್ದು, ಒತ್ತಡ ಮುಂದುವರಿದರೆ ಹೃದಯ ಅಥವಾ ನರಸಂಬಂಧಿ ಕಾಯಿಲೆಗೆ ತಿರುಗಬಹುದು ಅಂತ ಎಚ್ಚರಿಕೆ ಕೊಟ್ಟು, ಕೆಲ ಮಾತ್ರೆಗಳನ್ನು ಬರೆದುಕೊಟ್ಟರು. ಆನಂದ ಬೆಳಗ್ಗೆ ಮತ್ತು ಸಾಯಂಕಾಲ ಮನೆಯ ಸುತ್ತಲು, ಗಿಡಮರಗಳ ನಡುವೆ ಅವರನ್ನು ನಾಕಾರು ಸುತ್ತು ಪ್ರದಕ್ಷಿಣೆ ಮಾಡಿಸತೊಡಗಿದ. ಬಕುಲಾ ತಾವೂ ಸೇರಿಕೊಂಡರು.

ಸೀಮಂತಿನಿ ಆನಂದನಿಗೆ ಫೋನು ಮಾಡಿದಳು. ಇಲ್ಲಿಂದ ಹೋದ ಮೇಲೆ ಮೊದಲ ಬಾರಿ ಅವಳು ಮಾತಾಡಿದ್ದಳು. ದೇಶ್ವಂತರ ಆರೋಗ್ಯ ವಿಚಾರಿಸಿದಳು. ಅವಳ ಥೀಸಿಸ್ ಮುಕ್ತಾಯ ಹಂತದಲ್ಲಿತ್ತು. ಅದು ಇದು ಮಾತಾಡಿದವಳು 'ಆನಂದ್, ಕೆಲಸದ ವಿಚಾರ ಏನು ಮಾಡಿದೆ? ನಿನ್ನ ಯೋಚನೆ ಬರತಾನೆ ಇರತದೆ. ನಾವಿಬ್ಬರು ನದಿಯಲ್ಲಿ ಈಜಾಡಿದ್ದು ಕಣ್ಣಮುಂದೆ ಈಗಲೂ ಬರತದೆ. ಬೇಗ ಯೋಚಿಸೋ...' ಅಂದಳು. ಅವಳ ಮಾತಿನಲ್ಲಿ ತನ್ನ ಬಗೆಗಿನ ಆಸಕ್ತಿ ಸ್ಪಷ್ಟವಾಗಿತ್ತು. 'ನಿಂಗೇ ಗೊತ್ತಿದೆಯಲ್ಲ ಸೀಮಂತಿನಿ, ಅಜ್ಜನಿಗೆ ಇನ್ಮೇಲೆ ಒಬ್ಬರು ಇಲ್ಲಿರಲೇಬೇಕು...' ಅನ್ನುವಾಗ, ಅದಕ್ಕೇನೊ ಹೇಳಹೊರಟವಳು 'ಆಗಲಿ, ನೀನು ಫೋನು ಮಾಡತಾ ಇರು' ಅಂತ ಹೇಳಿ ಮಾತು ಮುಗಿಸಿದಳು.

***

ಡಿಸೆಂಬರ್ ತಿಂಗಳಾಗಿತ್ತು. ಹೇಮಂತ ಋತುವಿನ ಚಳಿ ಈ ವರ್ಷ ತೀಕ್ಷ್ಣವಾಗಿತ್ತು. ಅಂಗಳದ ಬಿಸಿಲಿನಲ್ಲಿ ದೇಶ್ವಂತರು ಆನಂದನೊಂದಿಗೆ ತಮಾಷೆ ಮಾತಾಡುತ್ತ ನಿಂತಿದ್ದರು. ಆರೋಗ್ಯವೀಗ ಸುಧಾರಿಸಿತ್ತು. ತಲೆನೋವು ಬರುವುದು ನಿಂತಿತ್ತು. ಅದನ್ನೆ ಹೇಳುತ್ತಿರುವಾಗ ಆನಂದನ ಮೊಬೈಲು ಸದ್ದುಮಾಡಿತು. ಆ ಕಡೆಯಿಂದ ಬಸಪ್ಪ ಸೆಟ್ಟರು ಮಾತಾಡುತ್ತಿದ್ದರು. ಸೆಟ್ಟರದು ದೊಡ್ಡ ಸಗಟು ವ್ಯಾಪಾರ. ಈ ಮನೆಗೆ ತಲೆಮಾರುಗಳಿಂದ ಆಪ್ತವಾಗಿದ್ದ ಮನೆತನ ಅವರದು. ಅವರ ಸಗಟು ವ್ಯವಹಾರಸ್ಥರ ಮೂಲಕ ಬಂದವರೊಬ್ಬರು ದೇಶ್ವಂತರೊಂದಿಗೆ ಏನೋ ಮಾತಾಡಲಿಕ್ಕಿದೆ ಅಂದದ್ದಕ್ಕೆ ಫೋನು ಮಾಡಿದ್ದರು. ಬಿಡುವಾಗಿದ್ದರೆ ಇನ್ನೊಂದು ಗಂಟೆಯಲ್ಲಿ ಬರಬಹುದಾ ಅಂತ ವಿಚಾರಿಸಿದರು. ಸೆಟ್ಟರಿಗೂ ಏನು ವ್ಯವಹಾರ ಅಂತ ಗೊತ್ತಿದ್ದಂತಿರಲಿಲ್ಲ. 'ಆಯ್ತು, ಬರಲು ಹೇಳಿ' ಅಂದರು ದೇಶ್ವಂತರು. ಮುಕ್ಕಾಲು ಗಂಟೆಯಲ್ಲಿ ದೊಡ್ಡ ಕಾರೊಂದು ಗೇಟಿನ ಪಕ್ಕ ಬಂದು ನಿಂತಿತು. ಇಬ್ಬರು ಕಾರಿಂದ ಕೆಳಗಿಳಿದರು. ಒಬ್ಬ ಮಧ್ಯವಯಸ್ಕಿನವ. ಸೂಟು ಹಾಕಿ ಟೈ ಕಟ್ಟಿದ್ದ. ಉಬ್ಬಿ ಕೆಳಕ್ಕೆ ಮಗುಚಿದ ಹೊಟ್ಟೆಯಡಿ ಬೆಲ್ಟು ಕೂತಿತ್ತು. ಇನ್‌ಶರ್ಟ್ ಮಾಡಿದ ಇನ್ನೊಬ್ಬ ದಪ್ಪಗೆ ಎತ್ತರವಾಗಿದ್ದ. ಕೈಮುಗಿಯುತ್ತಲೆ ಒಳಬಂದವರನ್ನು ಪಡಸಾಲೆಗೆ ಕರೆದೊಯ್ದು ಕುಳ್ಳಿರಿಸಿದರು.

ಇನ್‌ಶರ್ಟ್ ಮಾಡಿದವನು ತಾನು ಪುಂಡಲೀಕ ಜಾಗೀರದಾರ, ಬೆಳಗಾವಿಯಲ್ಲಿ ಲಾಯರು ಅಂತ ಪರಿಚಯ ಹೇಳಿಕೊಂಡು, ಸೂಟಿನವರನ್ನು ಚಂದನ್ ಭಾಯಿ ಅಂತ ಪರಿಚಯಿಸಿದ. ಆತ 'ಅರಾವಲಿ ಇಂಕ್' ಕಂಪನಿಯ ಲಾಯಜನ್ ಮ್ಯಾನೇಜರ್ ಹುದ್ದೆಯಲ್ಲಿದ್ದ. ಮಹಾರಾಷ್ಟ್ರ ಮತ್ತು ಕರ್ನಾಟಕ ಅವನ ಕಾರ್ಯಕ್ಷೇತ್ರವಾಗಿದ್ದಕ್ಕೆ ಸುಮಾರಾಗಿ ಕನ್ನಡ ಮಾತಾಡಲು ಕಲಿತಿದ್ದ. ಸೂಟುಕೇಸಿಂದ ಒಣಹಣ್ಣುಗಳ ದೊಡ್ಡ ಪೊಟ್ಟಣ ತೆಗೆದು ಕೊಡುತ್ತಾ, ಯಾರದೇ ಮನೆಗೆ ಹೋದರೂ ಸ್ನೇಹದ ಕುರುಹಾಗಿ ಕೊಡುವುದು ತಮ್ಮ ಸಂಪ್ರದಾಯವೆಂತಲೂ, ವ್ಯವಹಾರದ ಸೋಂಕು ಇದಕ್ಕಿಲ್ಲ ಅಂತ ನಮ್ರತೆಯಿಂದ ಹೇಳಿದ. ಪದ್ಧತಿಯಂತೆ ದೇಶ್ವಂತರು ಚಹ ಮಾಡಿಸಿದ್ದರು. ಚಹ ಕುಡಿದಾದ ಮೇಲೆ, ಇದು ತಮ್ಮ ಮತ್ತು ಈ ಮನೆಯವರ ಯಾವುದೋ ಪೂರ್ವ ಸಂಬಂಧವಿರಬೇಕು ಅನ್ನುತ್ತ ಸೌಹಾರ್ದದಿಂದ ಶುರುಮಾಡಿದ. ಆ ಭವನದ ಇತಿಹಾಸ, ಅದರ ನಿರ್ಮಾಣದ ಹೆಗ್ಗಳಿಕೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟ. ಇಂಥದನ್ನು ಯಾರೋ ಕೆಡವಿಸೊ ಮಾತಾಡಿದರಂತೆ! ತನಗೆ ಬಹಳ ಸಂತಾಪವಾಯಿತು, ಅಂತ ಮುಖದಲ್ಲಿ ನೋವು ವ್ಯಕ್ತಪಡಿಸಿದ. ನಾವಿದನ್ನು ಮತ್ಯಾರೂ ಕೈಹಚ್ಚದಂತೆ ವ್ಯವಸ್ಥೆ ಮಾಡಬೇಕು ಅಂದ. ನೀವೆಲ್ಲ ಒಪ್ಪಿದರೆ ಈ ಭವನ ನಿಮ್ಮೊಂದಿಗೆ ಶಾಶ್ವತವಾಗಿ ಉಳಿಯುವಂತ ಯೋಜನೆ ತನ್ನ ಹತ್ತಿರವಿದೆ ಅಂದ. ಅಂತದೇನು ಅನ್ನುವ ಕುತೂಹಲ ಮೂಡಿತು ದೇಶ್ವಂತರಲ್ಲಿ. ನಿರೀಕ್ಷಿತ ಪರಿಣಾಮ ಗುರುತಿಸಿದವ ವಿವರಿಸತೊಡಗಿದ: 'ಒಬ್ಬರಲ್ಲ ಒಬ್ಬರು ಇದರಮೇಲೆ ಕಣ್ಣು ಹಾಕತಾರೆ. ಭವಿಷ್ಯದಲ್ಲಿ ಸರಕಾರವೇ ಏನೋ ಕಾನೂನು ತಂದು ತನ್ನ ವಶಕ್ಕೆ ತಗೋಬಹುದು. ಮಕ್ಕಳು ಸಂಬಂಧಿಕರು ಏನೋ ಮಾಡಬಹುದು. ನಮ್ಮ ನಂತರ ಅವರನ್ನು ತಡೆಯೋರು ಯಾರು? ಅದಕ್ಕೇ ಈ ಭವನವನ್ನು, ಅದು ಈಗ ಹೇಗಿದೆಯೊ ಹಾಗೇ ಉಳಿಸಿಕೊಳ್ಳೊ ಕರಾರು ಹಾಕಿ, ಒಂದು ಕಂಪನಿಗೆ ವರ್ಗಾಯಿಸುವುದು. ಆ ಕಂಪನಿಯಲ್ಲಿ ಈ ಮನೆಯವರು ನಿಗದಿಪಡಿಸಿದ ಭಾಗಕ್ಕೆ ಪಾಲುದಾರರಾಗಿರ್ತಾರೆ. ಅದು ಬೇಡ ಅಂದರೆ, ಈ ಭವನಕ್ಕೆ ಬೆಲೆ ಕಟ್ಟಿ, ಇಂತಿಷ್ಟು ಅಂತ ಕೊಡುತ್ತದೆ ಕಂಪನಿ. ಅದಾಗಿಯು ಸಣ್ಣದೊಂದು ಭಾಗಕ್ಕೆ ಪಾಲುದಾರಿಕೆ ಕೊಡಿಸಬಹುದು.' ಅಂತ ನಿಲ್ಲಿಸಿದ.

ಯೋಜನೆ ಆಕರ್ಷಕವಾಗಿತ್ತು. ರಚನಾತ್ಮಕವಾಗಿದೆ ಅನಿಸುತ್ತಿತ್ತು. ಆದರೆ, ಸಂದೇಹಗಳೂ ಅನೇಕವಿದ್ದವು. 'ಕಂಪನಿಗೆ ವರ್ಗಾಯಿಸುವುದು, ಪಾಲುದಾರರಾಗುವುದು ಅಂದಿರಿ. ಪಾಲುದಾರಿಕೆ ಯಾವುದರಲ್ಲಿ?' ಸಂದೇಹ ಎದುರಿಟ್ಟ ಆನಂದ. 'ಸಹಜ ಸಂದೇಹ. ಕಟ್ಟಡ ಕಂಪನಿಗೆ ವರ್ಗಾವಣೆಯಾದ ಮೇಲೆ ಅದರ ನಿರ್ವಹಣೆಯಾಗಬೇಕಲ್ಲ. ಅದಕ್ಕೊಂದು ಯೋಜನೆಯಿದೆ. ಪುರಾತನ ಸಂಪ್ರದಾಯದಲ್ಲೆ, ಅತಿಥಿಗೃಹದಂತೆ ಬಳಸಿಕೊಳ್ಳೋದು. ಈ ಭವನದ ಒಂದು ಕಲ್ಲನ್ನಾಗಲಿ, ಹಿಡಿ ಮಣ್ಣನ್ನಾಗಲಿ ಬದಲಿಸೋಹಾಗಿಲ್ಲ. ಬಣ್ಣ ಬಳಿಯೋದಿಲ್ಲ, ಒಂದಿಂಚೂ ಆಧುನಿಕಗೊಳಿಸೋದಿಲ್ಲ. ಅದರಲ್ಲಿ ಹೊಂದಾಣಿಕೆಯ ಪ್ರಶ್ನೆಯೆ ಇಲ್ಲ. ಈಗಿದ್ದಂತೇ ಇರಬೇಕು. ಒಳಗಡೆ ಮಣ್ಣಿನಲ್ಲೆ, ಹಳೆಯ ರೀತಿಯಲ್ಲೆ, ಕೊಠಡಿಗಳಾಗಿ ವಿಂಗಡಿಸೋಣ. ನಮ್ಮ ಸನಾತನ ಕಾಲಕ್ಕೆ ಪಯಣಿಸುವ ಸೆಳೆತವುಳ್ಳ ಶ್ರೀಮಂತರು ಬಹಳ ಜನರಿದಾರೆ. ಅವರಿಗೆ ಆ ಸುಖ ಕೊಟ್ಟ ಪುಣ್ಯ, ಪುರಾತನ ವಾಸ್ತುವನ್ನುಳಿಸಿದ ಪುಣ್ಯ ಎರಡು ಕೆಲಸವೂ ಅಯ್ತು. ಜೊತೆಗೆ ಆದಾಯವೂ ಸಹ! ಅತಿಥಿಗೃಹಕ್ಕೆ 'ದೇಶಾಮಾತ್ಯ' ಅಂತ ನಿಮ್ಮ ಪೂರ್ವಜರ ಹೆಸರನ್ನೆ ಇಡೋಣ.' ಚಿತ್ರಣವನ್ನು ಎದುರಿಟ್ಟ ಚಂದನ್ ಭಾಯಿ. 'ಬೇರೆ ರಾಜ್ಯಗಳಲ್ಲೂ ಇಂತಹ ಹಲವು ಪುರಾತನ ವಾಸ್ತುಗಳನ್ನ ಕಾಪಾಡಿದೆ ಕಂಪನಿ. ಅಕಸ್ಮಾತ್ತಾಗಿ ಈ ಭವನದ ವಿಷಯ ಗೊತ್ತಾಯಿತು. ಹೀಗೆ ಸೇರಿ ಬರೋದು ಅದೃಷ್ಟ...' ಹೆಮ್ಮೆಯ ದನಿಯಲ್ಲಿ ಉದ್ಗರಿಸಿದ ಜಾಗೀರದಾರ. ಬಂದವರು ಹೊರಡುವ ಆತುರದಲ್ಲಿದ್ದಂತೆ ಕಂಡರು. ತಕ್ಷಣ ಏನನ್ನೂ ಹೇಳಲಾರದ ಅನಿಶ್ಚಿತತೆಯನ್ನು ಗುರುತಿಸಿದವರಂತೆ 'ಆತುರವಿಲ್ಲ, ನಾವು ಹೇಳೋದನ್ನ ಹೇಳಿದ್ದೇವೆ. ನಿರ್ಧಾರವೆ ಇರಲಿ, ಸಂದೇಹವೆ ಇರಲಿ ಫ್ರೀಯಾಗಿ ಮಾತಾಡಿ...' ಅನ್ನುತ್ತಾ ಎದ್ದು, ವಿಳಾಸದ ಕಾರ್ಡು ಕೊಟ್ಟು ನಮಸ್ಕರಿಸಿ ಹೊರಟರು.

ಅವರನ್ನು ಕಳಿಸಿ ಬಂದು, ಹಜಾರದಲ್ಲಿ ಕುಳಿತ ಇಬ್ಬರ ಮನಸೂ ಗೊಂದಲದ ಗೂಡಾಗಿತ್ತು. ಭವನವನ್ನು ಕೊಡುವ ಉದ್ದೇಶ ಖಂಡಿತ ಇರಲಿಲ್ಲ. ಆದರೆ ಇತ್ತೀಚಿನ ಅನಿರೀಕ್ಷಿತಗಳ ಜಾಡು ಹಿಡಿಯಲಾಗಬಹುದೇನೋ ಅಂತ ಬಂದವರನ್ನು ಮಾತಾಡಲು ಬಿಟ್ಟಿದ್ದರು. ಮೊದಲಿನ ಪ್ರಸ್ತಾಪಗಳಂತೆ ಇವರು ಮಾತಾಡುವಾಗ ಆತಂಕವಾಗಲಿ, ತಳಮಳವಾಗಲಿ ಆಗಿರಲಿಲ್ಲ. ತಮಗೆಲ್ಲೊ ಸಾಂತ್ವನ ನೀಡುವ ದನಿಯಲ್ಲಿ ಮಾತಿತ್ತು. ಮೊದಲಿನ ಹಾಗೆ, ಕೇಳುತ್ತಿರುವಾಗಲೆ, ಬೇಡ ಅನ್ನುವ ಧ್ವನಿ ರೂಪುಗೊಳ್ಳಲು ಅವಕಾಶವಾಗಿರಲಿಲ್ಲ. ಮಥಿಸುತ್ತ ಹೋದಂತೆ ಸಂದೇಹಗಳು ಮತ್ತೆ ಹುಟ್ಟಿಕೊಳ್ಳತೊಡಗಿದವು.

**(ಸಶೇಷ)**